ಸಾಲ ಮಕ್ಕಳೇ ತೀರಿಸುತ್ತಾರೆಂಬ ಅವನ ನಂಬಿಕೆ ಸುಳ್ಳಾಯಿತು.

ಅಣ್ಣಂದಿರೆಲ್ಲ ಬಹಳ ಬುದ್ಧಿವಂತರಾಗಿ ರ್‍ಯಾಂಕ್ ಪಡೆದು ದೊಡ್ಡ ದೊಡ್ಡ ಕೆಲಸಕ್ಕೆ ಸೇರಿದ್ದರು. ಅಲ್ಲಿವರೆಗೂ ಅಪ್ಪನಿಗೆ ಸಂತೋಷ ತುಂಬಿದ ದಿನಗಳೇ. ಆನಂತರ ಆಗಿದ್ದೆಲ್ಲ ಅನಿರೀಕ್ಷಿತ ಬದಲಾವಣೆಗಳು.

ಅಪ್ಪನಿಗೆ ಆಗ ಅನೇಕ ಬಾರಿ ಅನ್ನಿಸಿದೆ ‘ಮಕ್ಕಳು ಯಾವಾಗಲೂ ಕೈಲಿ ಆಡಿಸುವಷ್ಟು ಚಿಕ್ಕವರಾಗಿಯೇ ಇದ್ದರೆ ಚೆನ್ನ. ಬುದ್ಧಿ ಬರುವಷ್ಟು ಬೆಳೆದರೆ ನಮ್ಮ ಕೈ ಜಾರಿ ಹೋಗುತ್ತಾರೆ. ಮದುವೆ ಆದರಂತೂ ಕೇಳುವುದೇ ಬೇಡ’. ಕೊನೆಗೆ ಆಗಿದ್ದೂ ಹಾಗೆಯೇ.

ಮದುವೆಯಾಗಿ ಹೊರದೇಶದಲ್ಲಿ ಸೆಟಲ್ ಆಗಿ ಅಪ್ಪನಿಗೆ ಸಹಾಯ ಮಾಡಬೇಕಿದ್ದವರು ಅಪ್ಪನಿಂದ ದೂರವಾಗಿಬಿಟ್ಟರು. ಒಬ್ಬರೂ ಅಪ್ಪನ ಕಷ್ಟಕ್ಕೆ ಒದಗಲೇ ಇಲ್ಲ. ಅಪ್ಪನೂ ತುಂಬಾ ಆತ್ಮಾಭಿಮಾನಿ. ಅವರ ಸಹಾಯ ಕೇಳಲೇ ಇಲ್ಲ ಬಿಡಿ.

ನಾನು ಬುದ್ಧಿವಂತ ಅಲ್ಲ. ಪರೀಕ್ಷೆಗಳಲ್ಲಿ ಫೇಲ್ ಆಗಿದ್ದರಿಂದ ಹೊರ ದೇಶಕ್ಕೆ ಹೋಗುವುದಿರಲಿ. ನನ್ನೂರು ಬಿಟ್ಟು ಹೋಗುವುದು ಕೂಡ ಸಾಧ್ಯವಾಗಲಿಲ್ಲ. ಅಪ್ಪ ರಿಟೈರ್ ಆದ ಮೇಲೆ ಆ ಪ್ರೈಮರಿ ಶಾಲೆಯ ಮಾಸ್ತರಿಕೆ ನನಗೇ ದಕ್ಕಿತು.

ಆದದ್ದೆಲ್ಲಾ ಒಳಿತೇ ಆಯಿತು. ನಮ್ಮಪ್ಪನ ಜೊತೆಗೆ ಕೊನೆಗಾಲದಲ್ಲಿ ಒಬ್ಬರು ಜೊತೆಗಾರರು ಬೇಕಾಗಿತ್ತು. ಅದಕ್ಕಾಗಿ ನಾನು ಮದುವೆಯಾಗುವುದನ್ನೂ ತ್ಯಾಗ ಮಾಡಿ ಇಲ್ಲೇ ಉಳಿದುಕೊಂಡುಬಿಟ್ಟೆ. ನನಗೂ ಹೆಚ್ಚು ಕೆಲಸವಿರಲಿಲ್ಲ. ಅಪ್ಪನಿಗೆ ಸಹಾಯ ಮಾಡಿಕೊಂಡಿರುವುದು ನನ್ನ ಸುಯೋಗ ಎಂದುಕೊಂಡಿದ್ದೆ. ಅಪ್ಪನಿಗೆ ರಿಟೈರ್ ಆದ ಮೇಲೆ ಹಣ ಸಂಪಾದನೆಗಾಗಿ ಒಂದು ಸಣ್ಣ ಪೆಟ್ಟಿಗೆ ಅಂಗಡಿ ತೆರೆದು ಅಲ್ಲಿ ಕೂರಿಸಿದ್ದೆ. ಏನೋ ಅಲ್ಪ ಸ್ವಲ್ಪ ವ್ಯಾಪಾರವಾಗುತ್ತಿತ್ತು.

ಆದರೇನು ಮಾಡುವುದು? ಅಪ್ಪನಿಗೆ ಅಷ್ಟರಲ್ಲೇ ಕಾಯಿಲೆ ಶುರುವಾಗಿಬಿಡಬೇಕೇ? ದಿನೇ ದಿನೇ ಜಾಸ್ತಿಯಾಗಲಾರಂಭಿಸಿತು. ಅಪ್ಪ ದಿನದಿಂದ ದಿನಕ್ಕೆ ಸಣಕಲಾಗಲಾರಂಭಿಸಿದ. ಅದ್ಯಾಕೋ ಗೊತ್ತಿಲ್ಲ. ದುಡ್ಡಿಲ್ಲದವರಿಗೇ ದೊಡ್ಡ ಕಾಯಿಲೆಯಂತೆ.

ಅವನ ಹೃದಯ, ಮೂತ್ರಪಿಂಡ, ಶ್ವಾಸಕೋಶ ಎಲ್ಲದಕ್ಕೂ ಕಾಯಿಲೆ ಹಬ್ಬಿದೆ ಎಂದು ನನಗೆ ತಿಳಿದಿದ್ದು ಆಸ್ಪತ್ರೆಗೆ ಹೋದ ಮೇಲೇ. ಆದರೆ ಅವೆಲ್ಲವುಗಳ ನಿವಾರಣೆ ಸಾಧ್ಯತೆ ಇರುವುದು ನನಗೆಟುಕದ ದೊಡ್ಡಾಸ್ಪತ್ರೆಗಳಲ್ಲಿ ಮಾತ್ರ. ಅಣ್ಣಂದಿರ ಸಹಾಯ ದೊರಕಲೇ ಇಲ್ಲ. ಅಪ್ಪ ಅವರನ್ನು ಕೇಳಲೂ ಇಲ್ಲ. ಅಪ್ಪನ ದುಡ್ಡು ಯಾವಾಗಲೋ ಖಾಲಿಯಾಗಿತ್ತು. ಆಸ್ಪತ್ರೆ ತಿರುಗಾಟ ಜಾಸ್ತಿಯಾದಂತೆಲ್ಲಾ ನನ್ನ ಪರ್ಸ್ ಖಾಲಿಯಾಗಲಾರಂಭಿಸಿತು. ಅಂಗಡಿ ಸಾಮಾನುಗಳನ್ನು ಕೊಳ್ಳಲು ಹಣವಿಲ್ಲದೇ ಅಂಗಡಿ ಖಾಲಿಯಾಯಿತು. ವ್ಯಾಪಾರ ನಿಂತೇ ಹೋಯಿತು.

ಒಂದು ದಿನ ಇನ್ನು ಚಿಕಿತ್ಸೆ ಉಪಯೋಗವಿಲ್ಲ ಅಂತ ಡಾಕ್ಟರು ಕೈಚೆಲ್ಲಿ ಬಿಟ್ಟರು. ಅದು ಕೊನೆಗಾಲ. ಅಪ್ಪ ಕೋಮಾಕ್ಕೆ ಹೋಗಿಬಿಟ್ಟ. ‘ಬರುವವರು ಬಂದು ನೋಡಿಕೊಂಡು ಹೋಗಲಿ. ಬೇಕಾದರೆ ವೆಂಟಿಲೇಟರ್‌ನಲ್ಲಿ ಇಟ್ಟುಬಿಡೋಣ’ ಅಂತ ವೈದ್ಯರು ಸೂಚಿಸಿದರು.

ಅಷ್ಟು ವೆಚ್ಚ ಭರಿಸುವ ಶಕ್ತಿ ನನಗಿಲ್ಲ. ಯಾವ ರೀತಿಯ ಇನ್ಸುರೆನ್ಸ್ ಕೂಡ ಇರಲಿಲ್ಲ. ಅಣ್ಣಂದಿರಿಗೆ ಟೆಲಿಗ್ರಾಮ್ ಕೊಟ್ಟೆ. ಬದುಕಿದ್ದಾಗಲೇ ನೋಡಲು ಬರದಿದ್ದವರು ಇನ್ನು ಸಾಯುವುದನ್ನು ನೋಡಲು ಬರುತ್ತಾರೆಯೇ?. ಇಷ್ಟಾಗಿ ನಿಶ್ಚಿತವಾದ ಸಾವನ್ನು ಒಂದಷ್ಟು ದಿನ ಮುಂದೆ ಹಾಕುವುದರಿಂದ ಪ್ರಯೋಜನವಾದರೂ ಏನು?. ಹಣ ವ್ಯರ್ಥ ಅಷ್ಟೇ ಅಂದುಕೊಂಡು ಹಣ ಕಟ್ಟಿ ಹೆಣ ಬಿಡಿಸಿಕೊಂಡು ಬಂದುಬಿಟ್ಟೆ.

ಅಪ್ಪನ ಉದ್ದದ ದೇಹ, ಒಣ ಚರ್ಮ ಕಟ್ಟಿಗೆಯ ಕುಂಟೆಯಂತಾಗಿಬಿಟ್ಟಿತ್ತು. ಚಿತೆಯ ಮೇಲಿಟ್ಟು ಬೆಂಕಿ ಹಚ್ಚಿದ ತಕ್ಷಣವೇ ಆ ತಲೆ ಢಬ್ ಅಂತ ಒಡೆದು ಇಡೀ ದೇಹ ಧಗಧಗನೆ ಉರಿದು ಹೋಯಿತು. ನೋಡ ನೋಡುತ್ತಿದ್ದಂತೆಯೇ ಕಣ್ಣೆದುರೇ ಅಪ್ಪ ಸುಟ್ಟು ಬೂದಿಯಾಗಿದ್ದನ್ನು ಕಂಡು ನನಗೆ ಕರುಳು ಕಿತ್ತು ಬರುವಷ್ಟು ವೇದನೆಯಾಯಿತು.

ಆವತ್ತು ಅಪ್ಪನಿಲ್ಲದ ಮನೆಯಲ್ಲಿ ನಾನೊಬ್ಬನೇ... ಮನೆಯೆಲ್ಲ ಬಣಬಣ. ನನಗಾಗಿ ಮಾಡಿಕೊಂಡಿದ್ದ ಅಡುಗೆಯನ್ನೇ ಅವನಿಗೂ ಬಡಿಸುತ್ತಿದ್ದೆ. ಇವತ್ತು ಅವನ ತಟ್ಟೆ ಖಾಲಿ. ಇವತ್ತು ತಲೆ ಮೇಲೆ ಕೈಯಿಟ್ಟು ಪ್ರೀತಿಯಿಂದ ಮಾತಾಡಿಸುವವರು ಯಾರೂ ಇಲ್ಲ. ಅವನು ಕುರ್ಚಿಯ ಮೇಲೆ ಕೂತಂತೆ ಕಾಣಿಸುತ್ತಿದೆ.

ಅಪ್ಪ ನಿಶ್ಶಕ್ತನಾದಾಗ ಅವನು ಕೆಳಗೆ, ಮೇಲೆ ಕೂತೇಳಲು ಸಾಧ್ಯವಾಗುವಂತೆ ಕುರ್ಚಿಯೆದುರು, ಮಂಚದ ಮೇಲೆ, ಟಾಯ್ಲೆಟ್‌ನಲ್ಲಿ... ಎಲ್ಲ ಕಡೆ ಹಗ್ಗ ಕಟ್ಟಿಟ್ಟಿದ್ದೆ. ಅವೆಲ್ಲ ಅಲುಗಾಡದೇ ಅಪ್ಪನ ನೆನಪಾಗಿ ಕಾಡುತ್ತಿವೆ.

ಮುಂದಿನ ಕಾರ್ಯಕ್ರಮಗಳು ಹೇಗೆ ಎಂದು ಚಿಂತಿಸುತ್ತಿರುವಾಗ ಅಣ್ಣಂದಿರೆಲ್ಲ ಒಟ್ಟಾಗಿ ಸೇರಿ ನಿರ್ಧರಿಸಿಕೊಂಡು ಬರೆದ ಪತ್ರದ ಮುಂದಿನ ಭಾಗ ಓದಿದ್ದು ನೆನಪಾಯ್ತು.

‘ಕ್ಷಮಿಸು... ಅಪ್ಪನ ಅಂತ್ಯಕ್ರಿಯೆಗೆ ನಾವು ಬರಲಿಲ್ಲ ಅಂತ ಬೇಜಾರು ಪಟ್ಟುಕೊಳ್ಳಬೇಡ. ಈಗ ಹೇಗೋ ಕಷ್ಟಪಟ್ಟು ರಜೆ ಪಡೆದುಕೊಂಡು ‘ವೈಕುಂಠ ಸಮಾರಾಧನೆ’ಗೆ ಬರುತ್ತಿದ್ದೇವೆ. ಅಪ್ಪ ನಮ್ಮನ್ನು ಓದಿಸಿದ್ದರಿಂದ ನಾವು ಹೊರದೇಶಕ್ಕೆ ಬಂದು ಬದುಕಲು ಸಾಧ್ಯವಾಯಿತು. ಈಗ ಅಪ್ಪನ ಋಣ ತೀರಿಸಬೇಕು. ಅವನನ್ನು ಸಂತೋಷಪಡಿಸುವುದೇ ನಮ್ಮ ಗುರಿ. ಅಪ್ಪನನ್ನು ನಾವು ‘ವೈಕುಂಠಕ್ಕೆ’ ಸೇರಿಸಲೇಬೇಕು. ಎಷ್ಟು ಖರ್ಚಾದರೂ ಚಿಂತೆಯಿಲ್ಲ. ನಮಗೆ ಪುಣ್ಯ ಬರುತ್ತದೆ. ಬೆಂಗಳೂರಿನಲ್ಲಿ ಯಾವುದಾದರೂ ದೊಡ್ಡ ಫಂಕ್ಷನ್ ಹಾಲ್ ಬುಕ್ ಮಾಡು. ನೀನೂ ಬೆಂಗಳೂರಿಗೆ ಬಂದು ವ್ಯವಸ್ಥೆಮಾಡು.

ಒಂದು 500ರಿಂದ 1000 ಜನರನ್ನು ಆಹ್ವಾನಿಸಿದರೂ ಅಡ್ಡಿಯಿಲ್ಲ. ಎಲ್ಲಾ ನಮ್ಮ ಯೋಗ್ಯತೆಗೆ ತಕ್ಕಂತೆ ಚೆನ್ನಾಗಿ ನಡೆಯಬೇಕು. ಒಳ್ಳೆಯ ಋತ್ವಿಕರನ್ನು ಗೊತ್ತು ಮಾಡು. ದಾನ, ಧರ್ಮಗಳಿಗೆ ಲೋಪವಾಗಕೂಡದು. ಒಂದು ಡಬ್ಬ ತುಪ್ಪ, ಮೂರು ಡಬ್ಬ ಎಣ್ಣೆ, ಒಂದು ಡಬ್ಬ ಬೇಳೆ, 3 ಕುಂಬಳಕಾಯಿ, 4 ಚೀನೀಕಾಯಿ... ಮತ್ತೆ... ಒಂದು ಗೋವು...’ ಇನ್ನೂ ಏನೇನೋ ಬರೆದಿದ್ದರು.

ಬದುಕಿದಾಗ ಇಲ್ಲದವರು ಸತ್ತ ಮೇಲೆ ದೊಡ್ಡ ಮನಸ್ಸು ಮಾಡಿದ್ದಾರಲ್ಲ ಅಂತ ಸಂತೋಷಗೊಂಡೆ.

ಬಸ್ಸು ಬಲು ವೇಗವಾಗಿ ಚಲಿಸುತ್ತಿತ್ತು. ಅಷ್ಟರಲ್ಲಿ ಬಸ್ಸಿಗೆ ದೊಡ್ಡ ‘ಹಂಪು’ ಸಿಕ್ಕಿರಬೇಕು. ಜಂಪ್ ಆಗಿ ನಾನು ಒಂದಡಿ ಎತ್ತರಕ್ಕೆ ಮೇಲೆ ಹಾರಿದ್ದೇನೆ. ಲಗೇಜ್ ಕ್ಯಾರಿಯರ್ ನನ್ನ ತಲೆಗೆ ಬಡಿದು ಸಣ್ಣ ಗಾಯವಾಯಿತು. ನನ್ನ ಮನಸ್ಸಿನ ನೋವಿನ ಮುಂದೆ ಆ ಗಾಯದ ನೋವು ಏನೂ ಅಲ್ಲ ಬಿಡಿ. ಮೇಲಿಟ್ಟಿದ್ದ ನನ್ನ ಕೈ ಚೀಲ ಕೆಳಗೆ ಜಾರಿ ಬಿದ್ದಿದೆ. ಅದರೊಳಗಿದ್ದ ಅಣ್ಣಂದಿರು ಬರೆದ ಕಾಗದದ ಚೀಟಿ ನನ್ನ ತೊಡೆಯ ಮೇಲೆ ಬಿತ್ತು. ಅದು ಮನೆಯಲ್ಲಿ ಓದಿದ ಪತ್ರವೇ.

ಒಂದು ಪುಟದ ಆ ಪತ್ರವನ್ನು ಹಾಗೆಯೇ ಮಡಿಚಿ ಜೇಬಿನಲ್ಲಿಟ್ಟುಕೊಂಡೆ.

ಬಸ್ಸು ಮುಂದಕ್ಕೆ ಸಾಗುತ್ತಿತ್ತು. ಆಮೇಲೆ ಒಂದು ಕಡೆ ನಿಂತಿತು. ಡ್ರೈವರ್ ‘ಅರಸೀಕೆರೆ ಅರಸೀಕೆರೆ’ ಎಂದು ಕೂಗಿದ. ಬಸ್ ಕೆಳಗಿನಿಂದ ಒಬ್ಬ ಮಾಣಿ ‘ಅರ್ಧ ಗಂಟೆ ಟೈಮಿದೆ. ಕಾಫಿ, ಟೀ, ಟಾಯ್ಲೆಟ್’ ಎಂದು ಕಿರುಚುತ್ತಿದ್ದ. ಬಸ್ಸಿನಲ್ಲಿದ್ದ ಅನೇಕರು ನಿದ್ದೆಯಿಂದ ಎಚ್ಚೆತ್ತು ಬಡಬಡ ಇಳಿಯಲಾರಂಭಿಸಿದರು.

ನನಗೆ ಯಾಕೋ ಬಸ್ಸಿನೊಳಗೆ ಕೂರಲು ಸಾಧ್ಯವಾಗಲಿಲ್ಲ. ಕೆಳಗಿಳಿದು ಮೂತ್ರ ಬಾಧೆ ತೀರಿಸಿದೆ. ಕಾಫಿ ಕುಡಿಯಲು ಮನಸ್ಸಿಲ್ಲ. ಪಕ್ಕದಲ್ಲಿದ್ದ ಲೈಟ್ ಕಂಬದ ಕೆಳಗಿನ ಕಟ್ಟೆ ಮೇಲೆ ಕುಳಿತುಕೊಂಡೆ. ಕೆಳಗಡೆ ಬೀದಿ ದೀಪದ ಬೆಳಕಿತ್ತು. ಯಾಕೋ ಆ ಪತ್ರವನ್ನು ಇನ್ನೊಮ್ಮೆ ಬೆಳಕಿನಲ್ಲಿ ಓದಿಬಿಡೋಣ ಅನ್ನಿಸಿತು. ಜೇಬಿನಿಂದ ಹೊರತೆಗೆದು ಓದಲಾರಂಭಿಸಿದೆ.

ನಾನು ಅದನ್ನು ಇದುವರೆಗೂ ಒಂದು ಪುಟದ ಪತ್ರ ಎಂದೇ ಭಾವಿಸಿದ್ದೆ. ಒಂದು ಪುಟ ಓದಿದ ಮೇಲೆ ತುದಿಯಲ್ಲಿ ಸಣ್ಣಗೆ p.t.o. ಎಂದು ಬರೆದಿತ್ತು. ಕುತೂಹಲದಿಂದ ಪುಟ ತಿರುಗಿಸಿ ಓದಿದಾಗ ಒಮ್ಮೆಲೇ ದಂಗಾಗಿಬಿಟ್ಟೆ. ಬೆಳಕಿನಲ್ಲೀಗ ಅಕ್ಷರಗಳು ಚೆನ್ನಾಗಿ ಕಾಣಿಸುತ್ತಿವೆ.

‘ತಪ್ಪು ತಿಳಿಯಬೇಡ... ಒಂದು ಮಾತು ನಿನಗೆ ತಿಳಿಸಲೇಬೇಕು. ನಾವೆಲ್ಲಾ ಇಲ್ಲಿ ಸುಖವಾಗಿದ್ದೇವೆ ಎಂದು ಭಾವಿಸಬೇಡ. ಇಲ್ಲಿನ ಜನರ ಅಸಹನೀಯ ಜನಾಂಗೀಯ ಪ್ರತಿರೋಧ, ಹೆಂಡತಿ, ಮಕ್ಕಳು, ಮನೆ, ಎಲ್ಲ ನಿಭಾಯಿಸುವುದು ನಮಗೆ ಆರ್ಥಿಕವಾಗಿ ತುಂಬಾ ಕಷ್ಟಕರವಾಗಿದೆ. ನಮ್ಮ ದುಡಿಮೆ ಅಲ್ಲಿಂದಲ್ಲಿಗೆ ಎಂಬಂತಾಗಿದೆ. ನೀನಾದರೋ ಇದುವರೆಗೂ ಅಪ್ಪನ ಜೊತೆಯಲ್ಲೇ ಇದ್ದು ಅವನ ಆಸ್ತಿ, ಮನೆ ಎಲ್ಲವನ್ನೂ ಅನುಭವಿಸಿಕೊಂಡು ಆರಾಮಾಗಿದ್ದೀಯ. ನಾವು ಎಲ್ಲವನ್ನೂ ಬಿಟ್ಟು ಬಂದಿದ್ದೇವೆ. ನಾವು ಇದುವರೆವಿಗೂ ನಿನ್ನನ್ನು ಏನೂ ಕೇಳಿಲ್ಲ. ಇದೊಂದೇ ಸಲ ಕೇಳುತ್ತಿರುವುದು. ಈ ಅಪರ ಕರ್ಮಕ್ಕೆ ಎಷ್ಟು ಖರ್ಚು ಬರುತ್ತೋ ನಮಗೆ ಗೊತ್ತಿಲ್ಲ. ಅಷ್ಟೂ ಖರ್ಚು ಭರಿಸುವುದು ನಮಗೆ ಹೊರೆಯಾಗುತ್ತದೆ. ಅದಕ್ಕೆ ತಗುಲುವ ಅರ್ಧ ಖರ್ಚನ್ನು ನೀನು ಭರಿಸಬೇಕು. ಇನ್ನರ್ಧ ಖರ್ಚನ್ನು